

## ಮನಗೆಲ್ಲುವ ಸುವಾಸನೆಯ

# ಮೈಸೂರು ಮಲ್ಲಿಗೆ

■ ಶಿವಪ್ರಸಾದ್ ರೈ

ಚಿತ್ರಗಳು: ಅನೂಪ್ ರಾಘ ಟಿ.

‘ಮೈಸೂರು ಮಲ್ಲಿಗೆ’... ಈ ಹೆಸರು ಹೇಳಿದ ತಕ್ಷಣ ಪ್ರೇಮಕವಿ ಕೆ.ಎಸ್. ನರಸಿಂಹಸ್ವಾಮಿ ಅವರ ಜನಪ್ರಿಯ ಪ್ರೇಮಕಾವ್ಯ ಸಂಕಲನ ನೆನಪಾಗುತ್ತದೆ. ಆದರೆ ನಾವಿಲ್ಲಿ ಹೇಳ ಹೊರಟಿರುವುದು ತನ್ನ ವಿಶಿಷ್ಟ ಸುವಾಸನೆ, ಗುಣಮಟ್ಟದ ಕಾರಣಕ್ಕಾಗಿ ಭೌಗೋಳಿಕ ಸೂಚ್ಯಂಕ (ಜಿಐ ಟ್ಯಾಗ್) ಹೊಂದಿರುವ ‘ಮೈಸೂರು ಮಲ್ಲಿಗೆ’ ಕುರಿತು...

ಹಾಲ್ನೊರೆಯ ಬಣ್ಣ, ದುಂಡನೆಯ ಮೊಗ್ಗು, ಅರಳಿದರೆ ಸುಗಂಧ ಬೀರುವ ‘ಮೈಸೂರು ಮಲ್ಲಿಗೆ’, ಕವಿಗಳಿಂದ ಹಿಡಿದು ಹೆಣ್ಣುಮಕ್ಕಳ ಮನಸ್ಸು ಗೆದ್ದಿದೆ. ರಾಜರ ಕಾಲದಲ್ಲಿ ಕೃಷಿಗಷ್ಟೇ ಸೀಮಿತವಾಗಿದ್ದ ಈ ಮಲ್ಲಿಗೆ ನಂತರ ಉದ್ಯಮವಾಗಿ, ಕವಿ ಕಾಲದ ಗತವೈಭವಕ್ಕೆ ಸಾಕ್ಷಿಯಾಗಿದೆ. ಹಲವು ಕಡೆ ಮಹಿಳೆಯರಿಗೆ ಸ್ವ ಉದ್ಯೋಗದ ಭರವಸೆ ನೀಡಿ ಆರ್ಥಿಕ ಶಕ್ತಿಯಾಗಿ ಬೆಳೆದು ನಿಂತಿದೆ.

ಕರ್ನಾಟಕದ ಮಲ್ಲಿಗೆ ಕೃಷಿಯಲ್ಲಿ ಮುಖ್ಯವಾಗಿ ಮೂರು ವಿಧದ ತಳಿಗಳು ಪ್ರಸಿದ್ಧ. ಸುಗಂಧಭರಿತ ಹಾಗೂ ಹಳದಿ ಮಿಶ್ರಿತ ಬಿಳಿ ಬಣ್ಣದ ಮೊಗ್ಗುಗಳನ್ನು ಹೊಂದಿರುವ ಮೈಸೂರು ಮಲ್ಲಿಗೆ, ಕರಾವಳಿ ಭಾಗದಲ್ಲಿ ಜನಪ್ರಿಯವಾಗಿರುವ, ಉದ್ದನೆಯ ಮೊಗ್ಗುಗಳ ಉಡುಪಿ ಮಲ್ಲಿಗೆ (ಶಂಕರಪುರ ಮಲ್ಲಿಗೆ), ಬಾಡದೇ ಸುದೀರ್ಘ ಕಾಲ ಉಳಿಯುವ ಹೂವಿನ ಹಡಗಲಿಯ ಮಲ್ಲಿಗೆ ಜನಮನ ಗೆದ್ದಿವೆ. ಇವುಗಳಲ್ಲಿ ಮೈಸೂರು ಮಲ್ಲಿಗೆ ಹೆಚ್ಚಿನ ಬೇಡಿಕೆ ಹೊಂದಿದ್ದು, ಇತರೆ ಮಲ್ಲಿಗೆಗಿಂತ ದರವೂ ಹೆಚ್ಚಿದೆ.

ಮಹಾರಾಜರ ಕಾಲದಲ್ಲಿ ಈರಯ್ಯನ ಕೆರೆ ಹಾಗೂ ನಂತರ ವೀರನಗೆರೆಯಲ್ಲಿ ಬೆಳೆಯುತ್ತಿದ್ದ ಮೈಸೂರು ಮಲ್ಲಿಗೆಯನ್ನು ಈಗ ಜಿಲ್ಲೆಯ ಕೆಲವೇ ರೈತರು ಬೆಳೆಯುತ್ತಿದ್ದಾರೆ. ಒಂದೊಮ್ಮೆ ಕಾಣಲು ಅಪರೂಪವಾಗಿದ್ದ ಈ ಮಲ್ಲಿಗೆಗೆ 2006ರಲ್ಲಿ ಜಿಐ ಟ್ಯಾಗ್ ಮಾನ್ಯತೆ ದೊರೆತ ಬಳಿಕ ಮರುಜೀವ ದಕ್ಕಿತು. ಬಳ್ಳಿಗಳಲ್ಲಿ ಬೆಳೆಯುತ್ತಿದ್ದ ಮೈಸೂರು ಮಲ್ಲಿಗೆಯನ್ನು ತಮಿಳುನಾಡಿನ ವಿಧಾನದಲ್ಲಿ ಗಿಡಗಳಿಗೆ ರೂಪಾಂತರ ಮಾಡಲಾಯಿತು. ಪ್ರಸ್ತುತ ಮೈಸೂರು, ಶ್ರೀರಂಗಪಟ್ಟಣ, ಪಾಂಡವಪುರ ಮತ್ತು ಹುಣಸೂರು ಪ್ರದೇಶಗಳಲ್ಲಿ ಈ ಬೆಳೆ ಕಾಣಸಿಗುತ್ತದೆ.

ಯದುವಂಶದ ರಾಜರ ಕಾಲದಿಂದಲೂ ರಾಜ ಮರ್ಯಾದೆ ಪಡೆದಿರುವ ಮೈಸೂರು ಮಲ್ಲಿಗೆಗೆ ಇಂದಿಗೂ ವಿಶೇಷ ಸ್ಥಾನಮಾನವಿದೆ. ಮೈಸೂರಿನ ಅಧಿದೇವತೆ ಚಾಮುಂಡೇಶ್ವರಿಯ ನಿತ್ಯ ಅಲಂಕಾರಕ್ಕೆ ಈ ಮಲ್ಲಿಗೆ ಇರಲೇಬೇಕು. ಅದ್ಭುತ ಪರಿಮಳದಿಂದಾಗಿ ಸುಗಂಧದ್ರವ್ಯ ತಯಾರಿಕೆಯಲ್ಲಿಯೂ ಬೇಡಿಕೆ ಹೊಂದಿದೆ. ಇಂದಿಗೂ ಸಾಂಪ್ರದಾಯಿಕ ಕಾರ್ಯಕ್ರಮದಲ್ಲಿ ‘ಮೈಸೂರು ಮಲ್ಲಿಗೆ’ಗೆ ಪ್ರಧಾನ ಸ್ಥಾನ.

‘ಮೈಸೂರು ಮಲ್ಲಿಗೆ’ ಕವನದಲ್ಲಿನ ಪ್ರತಿ ಸಾಲುಗಳು ಮಲ್ಲಿಗೆಯ ಹೆಚ್ಚುಗಾರಿಕೆಯನ್ನು ಎತ್ತಿಹಿಡಿದಿವೆ. ಆಗಷ್ಟೇ ಮದುವೆಯಾದ ಪತಿರಾಯ ತನ್ನ ಪತ್ನಿಯನ್ನು ಕಾಣಲು ಮಾವನ ಮನೆಗೆ ಬಂದಾಗ ‘ಮಾವನ ಮನೆಯಲಿ ಮಲ್ಲಿಗೆ ಹೂಗಳ ಪರಿಮಳ ತುಂಬಿತ್ತು’ ಎಂದು ಬಣ್ಣಿಸಿದ್ದಾರೆ. ‘ನಿಜದ ಸಂತಸದಲ್ಲಿ ಬಿರಿದ ಮಲ್ಲಿಗೆಯಿಂದ... ಬರುವ ಕಂಪಿನ ಹೆಸರು ಪ್ರೇಮವೆಂದು’ ಎಂಬ ವರ್ಣನೆ ಇಂದಿಗೂ ಜನಮಾನಸದಲ್ಲಿ ಹಾಸುಹೊಕ್ಕಾಗಿದೆ. ಈ ಕವನದ ಸಾಲುಗಳನ್ನು ಆಧರಿಸಿ 1991ರಲ್ಲಿ ಟಿ.ಎಸ್. ನಾಗಾಭರಣ ಅವರು ‘ಮೈಸೂರು ಮಲ್ಲಿಗೆ’ ಎಂಬ ಸಿನಿಮಾ ನಿರ್ಮಿಸಿದರು. ಹೀಗೆ ಮಲ್ಲಿಗೆಯು ತನ್ನ ಗುಣದ ಮೂಲಕ ಮೈಸೂರು ಜಿಲ್ಲೆಗೂ ವಿಶ್ವಮಾನ್ಯತೆ ದೊರೆಯುವಂತೆ ಮಾಡಿದೆ.



ಮೈಸೂರಿನ ದೇವರಾಜ ಮಾರುಕಟ್ಟೆಯಲ್ಲಿ ಮೈಸೂರು ಮಲ್ಲಿಗೆ ವ್ಯಾಪಾರ